ದಿನಾಂಕ: 10-06-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು : 1ನೇ ಪ್ರತಿವಾದಿ ಪರ ಶ್ರೀ ಎ.ಹೆಚ್.ಎಸ್ ವಕೀಲರಿಂದ,**

ಕುರುಬರ ಹೊನ್ನುರಪ್ಪ ರವರ ಮರಣ ಹೊಂದಿದ ನಂತರ 1ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ 3 ಎಕರೆ 85 ಸೆಂಟ್ಸ್ ತನ್ನ ಹೆಸರಿಗೆ ಎಂ.ಅರ್ ನಂಃ18/2008-09 ದಿಃ18.11.2008 ರ ಪ್ರಕಾರ ವರ್ಗಾವಣೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಿಂದ ಅವರು ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಇಲ್ಲಿಯವರೆಗೆ ಸದರಿ ಜಮೀನಿನ ಮೇಲೆ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ, ನನ್ನ ತಂದೆ ಅಥವಾ ನಾನು ಸದರಿ ಜಮೀನಿನ ಮೇಲೆ ತೆರಿಗೆ ಕಟ್ಟಿರುವುದಿಲ್ಲ. ಸದರಿ ಜಮೀನಿನಲ್ಲಿ ಬೆಳೆ ಬೆಳೆದಿರುತ್ತೇವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಬೆಳೆ ದೃಡೀಕರಣ ಪತ್ರ ಸಲ್ಲಿಸಿರುವುದಿಲ್ಲ.

ನನ್ನ ವಾದ ಪತ್ರದಲ್ಲಿ ಇರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿ ಸರ್ಕಾರದ ಭೂಮಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ನನ್ನ ವಾದ ಪತ್ರದಲ್ಲಿ ದಾವಾ ಸ್ವತ್ತು ಸರ್ವೆ ಆಗಿದೆ ಎಂದು ಹೇಳಿದ್ದು, ಈ ಬಗ್ಗೆ ನಾನು ತಹಶೀಲ್ದಾರ ರವರಿಗೆ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ಅಧಿಕಾರಿಗಳಿಗೆ ದಾವಾ ಆಸ್ತಿಯಲ್ಲಿ ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸ್ಪಷ್ಟಪಡಿಸಲು ನಾನು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನಾಗಲಿ ನನ್ನ ತಂದೆಯಾಗಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೆ 1 ರಿಂದ 5ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು

ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರು ಬೆಳೆದ ಬೆಳೆಗಳ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಮಂಜೂರು ಆದ ಜಮೀನನ್ನು ನಾನು ಮಾರಾಟ ಮಾಡಿ ಪ್ರತಿವಾದಿಗಳ ಜಮೀನು ಹೊಡೆದುಕೊಳ್ಳುವ ಉದ್ದೇಶದಿಂದ ಸಂಚು ಹಾಕಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.